**ಚಾಸಾಃ 11 ಫ್ರಾಸಾಃ 6**

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 493/2023

| | |
|---|---|
| ಹೆಸರು | : ಮಹಮ್ಮದ್ ಜಾಕಿರ್ |
| ತಂದೆಯ ಹೆಸರು | : ರಜಾಕ್ |
| ಪ್ರಾಯ | : 23 ವರ್ಷ |
| ಉದ್ಯೋಗ | : ಚಾಲಕ |
| ವಾಸ | : ಮಲೆಬೆಟ್ಟು ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 29.09.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ಸಾಕ್ಷಿಗೆ ನಿಪಿ2, 3 ಮತ್ತು 16 ನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ-2(ಸಿ), ನಿಪಿ3(ಸಿ) ಮತ್ತು ನಿಪಿ16(ಬಿ) ಎಂದು ಗುರುತಿಸಲಾಯಿತು. ದಿಃ 24.12.2022 ರಂದು ತಕ್ಷೀರು ಸ್ಥಳದಲ್ಲಿ ದೇವಸ್ಥಾನದ ಹತ್ತಿರ ಪೊಲೀಸರು ಮಹಜರ್ ಮಾಡಲು ಬಂದಿದ್ದಾಗ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಸ್ಥಳದಲ್ಲಿ ನಾನು, ಚಾಸಾ10 ಮತ್ತು 1 ರವರು ಇದ್ದೆವು. ಆಗ ಪೊಲೀಸರಿಗೆ ಸ್ಥಳವನ್ನು ಚಾಸಾ1 ರವರು ತೋರಿಸಿಕೊಟ್ಟಿರುತ್ತಾರೆ. 2.30 ಗಂಟೆಯಿಂದ 3.00 ಗಂಟೆಯವರೆಗೆ ಪೊಲೀಸರು ಮಹಜರ್ ಮಾಡಿರುತ್ತಾರೆ. ಸಾಕ್ಷಿಗೆ ನಿಪಿ4 ಮತ್ತು 5 ನ್ನು ತೋರಿಸಲಾಗಿ ಅವುಗಳಲ್ಲಿ ತಾವು ಇರುವುದಾಗಿ ನೋಡಿ ಗುರುತಿಸಿರುತ್ತಾರೆ. ನಂತರ ಪೊಲೀಸರು ತಕ್ಷೀರಿಗೆ ಸಂಬಂಧಪಟ್ಟ ವಾಹನಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ನಿಪಿ2 ಮತ್ತು 3 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಬಿ.ಎಸ್ ವಕೀಲರಿಂದಃ

ನಾನು ಗೂಡ್ಸ್ ಗಾಡಿ ಚಾಲಕನಾಗಿದ್ದೇನೆ. ನಾನು ಸಿ.ಎಂ. ಚಿಕನ್ ಸೆಂಟರ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಚಾಸಾ1 ರವರು ನನ್ನನ್ನು ದೂರವಾಣಿ ಕರೆ ಮೂಲಕ ಕರೆಸಿರುತ್ತಾರೆ. ಅವರು ದೂರವಾಣಿ ಕರೆ ಮಾಡಿದಾಗ ಸಮಯ ಸುಮಾರು 2 ಗಂಟೆಯಾಗಿತ್ತು. ತಕ್ಷೀರು ಸ್ಥಳದಿಂದ ಅಂಗಡಿ 300 ಮೀಟರ್ ದೂರ ಇದೆ. ಚಾಸಾ1 ರವರು ನನ್ನ ತಂದೆ. ಸಹಿ ಮಾಡುವಾಗ 2.30 ಗಂಟೆಯಾಗಿತ್ತು. ನಿಪಿ2 ಮತ್ತು 3 ರಲ್ಲಿ ಏನೆಲ್ಲಾ ಆಗಿದೆ ಎಂಬುದನ್ನು ಬರೆದಿದ್ದಾರೆ. ಅದನ್ನು ಪೊಲೀಸರು ಬರೆದಿರುತ್ತಾರೆ. ಎಷ್ಟು ಜನ ಪೊಲೀಸರು ಬಂದಿದ್ದರು ಎಂದು ನೆನಪಿಲ್ಲ. ನಾನು ಹೋಗುವಾಗ ಬರವಣಿಗೆಯಾಗುತ್ತಿತ್ತು. ಸ್ಥಳಕ್ಕೆ ಹೋಗಿ ಎಷ್ಟು ಸಮಯದಲ್ಲಿ ಸಹಿ ಮಾಡಿರುತ್ತೇನೆ ಎಂಬುದು ನೆನಪಿಲ್ಲ. ಅವುಗಳಲ್ಲಿ ಏನೆಲ್ಲಾ ಬರೆದಿದ್ದಾರೆ ಹೇಳಬಹುದಾ ಎಂದರೆ ಸಾಕ್ಷಿ ಸ್ಕೂಲ್ ಬಸ್ಸು ಕೊಯ್ಯೂರಿನಿಂದ ಬೆಳ್ತಂಗಡಿಗೆ ಆಟೋ ರಿಕ್ಷಾ ಬೆಳ್ತಂಗಡಿಯಿಂದ ಕೊಯ್ಯೂರಿಗೆ ಹೋಗುವಾಗ ಅಪಘಾತವಾಗಿದೆ ಎಂಬುದನ್ನು ಅಂದಾಜಿಗೆ ಹೇಳಿದ್ದೇನೆ. ಪೊಲೀಸರು ಬರವಣಿಗೆ ಮಾಡಿದ್ದಲ್ಲದೇ ಬೇರೆ ಏನಾದರೂ ಮಾಡಿದ್ದಾರಾ ಎಂದರೆ ಇಲ್ಲ. ಬರವಣಿಗೆ ಮಾಡಿ ನಮ್ಮ ಸಹಿ ಪಡೆದಿದ್ದಾರೆ.

2. ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಸ್ಥಳದಲ್ಲಿ ಬಸ್ಸಿನ ಟಯರ್ ಮಾರ್ಕ್ ಇರುವುದನ್ನು ಗಮನಿಸಿದ್ದೇನೆ. ರಿಕ್ಷಾದ ಟಯರ್ ಮಾರ್ಕನ್ನು ಗಮನಿಸಿರುವುದಿಲ್ಲ. ಸಹಿ ಮಾಡಿದ ಕೂಡಲೇ ನಾನು ಅಂಗಡಿಗೆ ಹೊರಟುಹೋಗಿರುತ್ತೇನೆ. ಆ ಸಮಯದಲ್ಲಿ ಬೇರೆ ಯಾರು ಇರಲಿಲ್ಲ, ನಾವುಗಳು ಮಾತ್ರ ಇದ್ದೆವು. ತಕ್ಷೀರು ಸ್ಥಳ ತಿರುವಿನಿಂದ ಕೂಡಿದ ಸ್ಥಳ. ತಕ್ಷೀರು ತಿರುವಿನಲ್ಲಿ ಆಗಿರುತ್ತದೆ. ಅಪಘಾತವಾಗುವಾಗ ನಾನು ನೋಡಿರುವುದಿಲ್ಲ. ವಾಹನಗಳು ಇದ್ದ ಕಾರಣ ಅಂದಾಜಿನಲ್ಲಿ ಹೇಳಿದ್ದೇನೆ. ನಾನು ಹೋಗುವಾಗ ನಾನು ಹೇಳಿದ ವಾಹನಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪೊಲೀಸರು ತಯಾರು ಮಾಡಿದ ಮಹಜರ್ ಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ1 ರವರು ನನ್ನ ತಂದೆಯಾದ ಕಾರಣ ಅವರು ನೀಡಿದ ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಬ)